**ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ, ಮಧುಗಿರಿ.**
**ಸಿ.ಸಿ ಸಂಖ್ಯೆ: 2126/2021**

| | | |
|---|---|---|
| ಹೆಸರು | ಹನುಮಂತರಾಯಪ್ಪ ಹೆಚ್ ಜಿ | ಚಾಸಾಃ 28 |
| ತಂದೆ/ಗಂಡನ ಹೆಸರು | ಗಂಗಣ್ಣ | ಫ್ರಾಸಾಃ 17 |
| ವಯಸ್ಸು | 44 ವರ್ಷ | ಸಾಕ್ಷಿಯನ್ನು ದಿನಾಂಕಃ 12-12-2025 ರಂದು ಪ್ರಮಾಣೀಕರಿಸಲಾಯಿತು. |
| ಉದ್ಯೋಗ | ಸರ್ಕಾರಿ ಇನ್ಸ್ ಪೆಕ್ಟರ್ | |
| ವಾಸ | ಮಧುಗಿರಿ<br>ಮಧುಗಿರಿ ತಾಲ್ಲೂಕು | |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ-**

ದಿನಾಂಕಃ 23-09-2020 ರಿಂದ 07.08.2023 ವರೆಗೆ ಪೋ.ಇನ್ಸ್ ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 17.01.2021 ರಂದು ಪಿರ್ಯಾದುದಾರರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಪಡೆದು ಠಾ .ಮೊ.ನಂ. 7/2021 ರಂತೆ ಪ್ರಕರಣ ವನ್ನು ದಾಖಲು ಮಾಡಿ ಪ್ರ.ವ.ವ ಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದೇ ದಿನ ತುಮಕೂರು ಶವಾಗಾರಕ್ಕೆ ಮೃತಗಂಗಪ್ಪ ಅಲಿಯಾಸ್ ನರಸಿಂಹಪ್ಪ ರವರು ಶವತನಿಖಾ ಚಾಸಾ-20 ರಿಂದ 22 ರವರ ಸಮಕ್ಷಮ 10.30 ರಿಂದ 3.00 ಗಂಟೆಯ ವೆರೆಗೆ ಪಂಚನಾವೊ ಜರುಗಿಸಿರುತ್ತೇನೆ. ಪಂಚನಾಮೆ ಸಮಯದಲ್ಲಿ ಚಾಸಾ 16 ರಿಂದ 19 ರವರು ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

ನಂತರ ಘಟನಾ ಸ್ಥಳ ಕ್ಕೆ ಹೋಗಿ ಚಾಸಾ 10 ಮತ್ತು 11 ರವರ ಸಮಕ್ಷಮ ಚಾಸಾ 3 ರವರು ತೋರಿಸಿದ ಸ್ಥಳ ದಲ್ಲಿ ಪಂಚನಾಮೆಯನ್ನು ಸಂಜೆ 4.45 ರಿಂದ 5.45 ರವರೆಗೆ

ಜರುಗಿಸಿರುತ್ತೇನೆ. ಮಹಜರ್ ಸಮಯದಲ್ಲಿ ಫೋಟೋ ತೆಗೆದಿರುತ್ತೇನೆ. ಅದೇ ದಿನ ಚಾಸಾ 3 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಪಂಚನಾಮೆ ಸಮಯದಲ್ಲಿ ಕಚ್ಚಾ ನಕ್ಷೆಯನ್ನು ತಯಾರು ಮಾಡಿರುತ್ತೇನೆ. ದಿಃ 18.01.2021 ರಂದು ಚಾಸಾ 14 ರವರಿಗೆ ಕಾರಿನ ಮಾಲೀಕರಾದ 183 ಐಎಂವಿ ಅಡಿಯಲ್ಲಿ ನೋಟೀಸ್ ನೀಡಿ ಉತ್ತರ ಪಡೆದಿರುತ್ತೇನೆ. ಚಾಸಾ 14 ರವರು ಕಾರ್ ಸಂಖ್ಯೆ ಕೆಎ–51–ಎಂವಿ–2974 ಮತ್ತು ದ್ವಿಚಕ್ರ ವಾಹನ ಕೆಎ-06–ಆರ್ –7707 ಗಳನ್ನು ಠಾಣೆಗೆ ತಂದು ಹಾಜರುಮಾಡಿದ ಮೇರೆಗೆ ದಿಃ 18.01.2021 ರಂದು ಚಾಸಾ 12 ಮತ್ತು 13 ರವರ ಸಮಕ್ಷಮ 12.30 ರಿಂದ 1.30 ರವರೆಗೆ ಪಂಚನಾಮೆ ಜರುಗಿಸಿ ವವಶಕ್ಕೆ ತೆಗೆದುಕೊಂನಡಿರುತತೆತೀನೆ. ಅವುಗಳ ಮಾಲುಪಟ್ಟಿ ಯಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಪಂಚನಾಮೆ ಸಮಯದಲ್ಲಿ ಫೋಟೋ ತೆಗೆದಿರುತ್ತೇನೆ.

ಅದೇ ದಿನ ಚಾಸಾ 4 ಮತ್ತು 5 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿಃ 19.01.2021 ರಂದು ಅಪಘಾತಕ್ಕೆ ಸಂಬಂಧಪಟ್ಟ ವಾಹನಗಳನ್ನು ತಪಾಸಣೆ ಮಾಡಿ ಮನವಿ ಸಲ್ಲಿಸುವಂತೆ ಚಾಸಾ 23 ರವರಿಗೆ ಮನವಿ ಸಲ್ಲಿಸಿರುತ್ತೇನೆ. ಅದೇ ದಿನ ಆರೋಪಿ ಠಾಣೆಗೆ ಹಾಜರಾದ ಮೇರೆಗೆ ಅವರ ಮೇಲೆ ದಸ್ತಗಿರಿ ಕ್ರಮ ಅನುಸರಿಸಿ ಜಾಮೀನಿನ ಬಿಡುಗಡೆ ಮಾಡಿರುತ್ತೇನೆ. ಅದೇ ದಿನ ಕಾರನ್ನು ಚಾಸಾ 14 ರವರಿಗೆ ಬಿಡುಗಡೆಮಾಡಿರುತ್ತೇನೆ . ಅದೇ ದಿನ ಚಾಸಾ 6, 7 ಮತ್ತು 9 ರವರುಗಳ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

ದಿಃ 25.01.2021 ರಂದು ಮೃತನ ಪಿ ಎಂ ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ನ್ಯಾಯಾಲಯಕ್ಕೆ ಎಫ್ ಐ ಆರ್ ನಂ. 7/2020 ಎಂದು ನಮೂದಿಸಿದ್ದು, ಅದನ್ನು ಠಾ .ಮೊ ನಂ. 7/2021 ಎಂದು ತಿದ್ದುಪಡಿಗೆ ಮನವಿಯನ್ನು ಸಲ್ಲಿಸಿರುತ್ತೇನೆ. ದಿಃ 10.02.2021 ರಂದು ಗಾಯಾಳು ಚಾಸಾ 2 ಮತ್ತು 8 ರವರುಗಳ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

ದಿಃ 31.01.2021 ರಂದು ಚಾಸಾ 23 ರವರಿಂದ ಪಡೆದು ಐ ಎಂ ವಿ ವರದಿಯನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 04.06.2021 ರಂದು ಟಿ ವಿ ಎಸ್ ವಾಹನ ಮಾಲೀಕರಾದ ಚಾಸಾ 15 ರವರಿಗೆ ಬಿಡುಗಡೆ ಮಾಡಿರುತ್ತೇನೆ. ದಿಃ 15.06.2021 ರಂದು ಚಾಸಾ 2 ರವರ ಗಾಯದ ಪ್ರಮಾಣಪತ್ರವನ್ನುಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ತನಿಖೆಯನ್ನು ಪೂರ್ಣಗೊಳಿಸಿ, ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಸಾಕ್ಷಿಯು ಪಿರ್ಯಾದನ್ನು ನೋಡಿ ಗುರ್ತಿಸಿದ್ದು ಅದು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುಸಲಾಯಿತು. ಸಾಕ್ಷಿಯು ಪ್ರ.ವ.ವ ನ್ನು ನೋಡಿ ಗುರ್ತಿಸಿದ್ದು ಅದನ್ನು ನಿಪಿ-10 ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ಥಳ ಪಂಚನಾಮೆಯನ್ನು ನೋಡಿ ಗುರ್ತಿಸಿದ್ದು ಅದು ಈಗಾಗಲೇ ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಡಿ) ಎಂದು ಗುರುಸಲಾಯಿತು. ಸಾಕ್ಷಿಯು ಪಂಚನಾಮೆ ಸಮಯದಲ್ಲಿ ತೆಗೆದ ಪೋಟೋಗಳನ್ನು ನೋಡಿ ಗುರ್ತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ಖಚ್ಚಾ ನಕ್ಷೆಯನ್ನು ನೋಡಿ ಗುರ್ತಿಸಿದ್ದು ಅದನ್ನು ನಿಪಿ-11 ಎಂದು, ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುಸಲಾಯಿತು. ಸಾಕ್ಷಿಯು ಅಮಾನತ್ತು ಪಂಚನಾಮೆಯನ್ನು ನೋಡಿ ಗುರ್ತಿಸಿದ್ದು ಅದನ್ನು ಈಗಾಗಲೇ ನಿಪಿ-6 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-6(ಡಿ) ಎಂದು ಗುರುತಿಸಲಾಯಿತು. ಸಾಕ್ಷಿಯು ವಾಹನಗಳ ಪೋಟೋಗಳನ್ನು ನೋಡಿ ಗುರ್ತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-2 ಮತ್ತು ನಿಪಿ-5 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ಕಾರಿನ ಮಾಲೀಕರಿಗೆ ಕಲಂ 133 ರಡಿಯಲ್ಲಿ ನೀಡಿರುವ ನೋಟೀಸ್ ಉತ್ತರವನ್ನು ನೋಡಿ ಗುರ್ತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-12 ಮತ್ತು 13 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-12(ಬಿ) ಮತ್ತು 13(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಇಂಡಿಮಿನಿಟಿ ಬಾಂಡ್ ನೋಡಿ ಗುರ್ತಿಸಿದ್ದು ಅದನ್ನು ಈಗಾಗಲೇ ನಿಪಿ-14 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-14(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಶವಪಂಚನಾಮೆ ನೋಡಿ ಗುರ್ತಿಸಿದ್ದು ಅದನ್ನು ಈಗಾಗಲೇ ನಿಪಿ-6 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು

ನಿಪಿ-6(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪಿ ಎಂ ವರದಿಯನ್ನು ನೋಡಿ ಗುರ್ತಿಸಿದ್ದು ಅದನ್ನು ಈಗಾಗಲೇ ನಿಪಿ-7 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಐಎಂವಿ ವರದಿಯನ್ನು ನೋಡಿ ಗುರ್ತಿಸಿದ್ದು ಅದನ್ನು ಈಗಾಗಲೇ ನಿಪಿ-8 ಎಂದುಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಗಾಯದ ಪ್ರಮಾಣಪತ್ರವನ್ನು ನೋಡಿ ಗುರ್ತಿಸಿದ್ದು ಅದನ್ನು ಈಗಾಗಲೇ ನಿಪಿ-9 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುಸಲಾಯಿತು. ಸಾಕ್ಷಿಯು ದ್ವಿಚಕ್ರ ವಾಹನದ ಇಂಡಿಮಿನಿಟಿ ಬಾಂಡ್ ನ್ನು ನೋಡಿ ಗುರ್ತಿಸಿದ್ದು ಅದನ್ನು ನಿಪಿ- 12 ಎಂದು, ಸಾಕ್ಷಿಯ ಸಹಿಯನ್ನು ನಿಪಿ- 12(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲು: ಆರೋಪಿ ಪರ ಶ್ರೀ ಪಿ ಡಿ ಟಿ ವಕೀಲರಿಂದಃ-</u>**

ಪಿರ್ಯಾದಿನಲ್ಲಿ ನಮ್ಮ ತಂದೆಯ ಬೈಕ್ ಮತ್ತು ಕಾರ್ ಸ್ಥಳ ದಲ್ಲೇ ಇದ್ದು ಜಖಂ ಗೊಂಡಿರುತ್ತವೆ ಎಂಬ ಪ್ರಶ್ನೆಗೆ ಸಾಕ್ಷಿಯು ಅಪಪಘಾತವಾದಾಗ ಸ್ಥಳ ದಲ್ಲೇ ಇವೆ ಎಂದು ಉತ್ತರ ನೀಡಿರುತ್ತಾರೆ. ಆರೋಪಿಯು ಕಾರನ್ನು ಅಪಘಾತ ಸ್ಥಳ ದಿಂದ ಎತ್ತಿಕೊಂಡು ಹೋಗಿರುತ್ತಾರೆ ಎಂದು ಹೇಳಿಕೆಯನ್ನು ನೀಡಿರುವುದಿಲ್ಲ. ಅಪಘಾತ ಸ್ಥಳ ಕ್ಕೂ ನಮ್ಮ ಠಾಣೆಗೂ 15 ಕಿ.ಮೀ ಅಂತರವಿರುತ್ತದೆ.

ಮಧುಗಿರಿ ಆಸ್ಪತ್ರೆಯಲ್ಲಿ ಗಾಯಾಳು ಮತ್ತು ಮೃತ ವ್ಯಕ್ತಿ ಚಿಕಿತ್ಸೆಪಡೆದ ಬಗ್ಗೆ ನಾನು ಮಾಹಿತಿ ಪಡೆದಿರುವುದಿಲ್ಲ. ಮಧುಗಿರಿ ಆಸ್ಪತ್ರೆಯಲ್ಲಿ ಗಾಯಾಳು ಮತ್ತು ಮೃತ ವ್ಯಕ್ತಿ ಚಿಕಿತ್ಸೆ ಪಡೆದ ಬಗ್ಗೆ ಮಾಹಿತಿ ನನಗೆ ಬಂದಿರುವುದಿಲ್ಲ. ಘಟನಾ ಸ್ಥಳ ಪೂರ್ವ -ಪಶ್ಚಿಮ ಭಾಗದಿಂದ ದಕ್ಷಿಣ ದಿಕ್ಕಿಗೆ ರಸ್ತೆ ಇದೆ ಎಂದರೆ ಸರಿ. ಅಪಘಾತ ಸ್ಥಳದಲ್ಲಿ ಯಾವುದೇ ಬೆಳಕಿನ ದೀಪ ಇರುವುದಿಲ್ಲ. ಚಾಸಾ 3 ರಿಂದ 5 ರವರ ವಾಹನಗಳು ಅಪಘಾತಕ್ಕೀಡಾದ ಟಿ ವಿ ಎಸ್ ದ್ವಿಚಕ್ರ ವಾಹನದ ಹಿಂಬಾಗ ಬರುತ್ತಿದ್ದವು. ದ್ವಿಚಕ್ರ ವಾಹನದ ಎದುರು ರಸ್ತೆಯ ಎದುರುಗಡೆಯಿಂದ

ಬಂದಿರುತ್ತದೆ.  ಕಾರು ಹೊಸಕೆರೆ ರಸ್ತೆಯಿಂದ ಬಂದಿರುತ್ತದೆ. ದ್ವಿಚಕ್ರ ವಾಹನ ತಿರುಗಿದಾಗ  ಕಾರು ಎದುರುಗಡೆಯಿಂದ ಡಿಕ್ಕಿ ಪಡಿಸಿರುತ್ತದೆ. ಕಚ್ಚಾ ನಕ್ಷೆಯಲ್ಲಿ ತೋರಿಸಿದ ಕೃತ್ಯ ಸ್ಥಳ ವು ವಾಹನಗಳು ಡಿಕ್ಕಿ ಪಡಿಸಿದ ಸ್ಥಳ ವಾಗಿರುತ್ತದೆ. ಯಾವುದೇ ಕಾರು ದ್ವಿಚಕ್ರ ವಾಹನಕ್ಕೆ ಡಿಕ್ಕಿ ಪಡಿಸಿದಾಗ **ಎಗರಿ** ಬೀಳುತ್ತದೆ ಎಂದರೆ ಸರಿ.  ಕೃತ್ಯ ನಡೆದ ಸ್ಥಳದಲ್ಲಿ ಕಾರು ದ್ವಿಚಕ್ರ ವಾಹನಕ್ಕೆ ಡಿಕ್ಕಿ ಪಡಿಸಿಲ್ಲ ಎಂದರೆ ಸರಿಯಲ್ಲ.  ಸ್ಥಳ ಪಂಚನಾಮೆಯನ್ನು ಜರುಗಿಸಿದಾಗ ಸ್ಥಳ ದಲ್ಲಿ ಕಾರು ಮತ್ತು ದ್ವಿಚಕ್ರ ವಾಹನ ಇರುವುದಿಲ್ಲ  ಚಕ್ರ ವಾಹನ  ಠಾಣೆಗೆ ತಂದ ಬಗ್ಗೆ ಮತುತ ಕಾರನ್ನು ಕಾರಿನ ಮಾಲೀಕ ತೆಗೆದುಕೊಂಡು ಹೋದ ಬಗ್ಗೆ ತನಿಖೆಯಿಂದದ ತಿಳಿದುಕೊಂಡಿರುತ್ತೇನೆ. ಸದರಿ ಮಾಹಿತಿಯನ್ನು ಸಿಬ್ಬಂದಿಗಳಿಂದ ತಿಳಿದುಕೊಂಡಿರುತ್ತೇನೆ. ಅದಕ್ಕೆ ಸಂಬಂಧಪಟ್ಟ ಯಾವುದೇ ದಾಖಲೆ ಇರುವುದಿಲ್ಲ.  ನಾನು ಪಡೆದು ಕೊಂಡ ಹೇಳಿಕೆಯಲ್ಲಿ ಅಪಘಾತ ಸ್ಥಳದಲ್ಲಿ ಯಾವ –ಯಾವ ಸ್ಥಳ ದಲ್ಲಿ ಯಾವ ಯಾವ ವಾಹನ ಇತ್ತು ಎಂದು ಹೇಳಿಕೆಯನ್ನು ಕೊಟ್ಟಿರುವುದಿಲ್ಲ. ಘಟನಾ ಸ್ಥಳ ಕತ್ತಲಾಗಿದ್ದರಿಂದ ದ್ವಿಚಕ್ರ ವಾಹನ ಅತಿವೇಗ ವಾಗಿ ಚಾಲನೆ ಮಾಡಿ ತಿರುಗುವ ಸಮಯದಲ್ಲಿ ಅಪಘಾತವಾಗಿದೆ ಎಂದರೆ ಸರಿಯಲ್ಲ. ಈ ಕಾರಣದಿಂದ ದ್ವಿಚಕ್ರ ವಾಹನ ಸವಾರನು ಮೃತಪಟ್ಟಿರುತ್ತಾನೆ, ಆರೋಪಿ ಕಾರು ಡಿಕ್ಕಿ ಪಡಿಸಿಲ್ಲ ಎಂದರೆ ಸರಿಯಲ್ಲ. ಮೃತರ ಕುಟುಂಬಕ್ಕೆ ಮತ್ತು ಗಾಯಾಳುವಿಗೆ ಪರಿಹಾರ ಕೊಡಿಸುವ ದೃಷ್ಟಿಯಿಂದ ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತ ಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ  ಮಾಡಲಾಯಿತು)

**ಓ ಹೇ ಕೇ ಸ ಇ ಎ ಒ**

(ಎ.ಎನ್.ಕಾಂತಮ್ಮ)
**ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**
**ಮಧುಗಿರಿ.**